

ಡಾ.ವಿನೋದ ಛೆಬ್ಬಿ

**ಪರಸಂಬಂಧವನ್ನು ಬಿಡದ ಸಂಗಾತಿಯೊಡನೆ ಬದುಕಬೇಕೆಂದು ಒತ್ತಾಯಿಸುವುದು ಕ್ರೌರ್ಯವಾಗುತ್ತದೆ!**

# 152: ಪರಸಂಬಂಧ- 15

ತನ್ನ ಸಂಗಾತಿಯು ಪರಸಂಬಂಧವನ್ನು ನಿಲ್ಲಿಸುವ ಲಕ್ಷಣಗಳು ಕಾಣದಿದ್ದಲ್ಲಿ ನೊಂದವರು ಏನು ಮಾಡುತ್ತಾರೆ ಎಂಬುದರ ಬಗೆಗೆ ಹೋದಸಲ ಮಾತಾಡುತ್ತಿದ್ದೆವು. ತನ್ನಲ್ಲೇ ತಪ್ಪಿದೆ, ಅಥವಾ ತನ್ನ ಪ್ರೀತಿಯು ಬಲವಾಗಿದ್ದರೆ ತನ್ನ ಪತಿ ಮರಳುತ್ತಾನೆ ಎಂದು ನಂಬಿರುವ ಮಹಿಳೆಯರ ಮನದೊಳಗೆ ಅತಿಯಾದ ಕೀಳರಿಮೆ ಹಾಗೂ ಆತ್ಮಹೀನತೆ ಇರುತ್ತವೆಯೆಂದು ತಿಳಿದುಕೊಂಡೆವು. ಇನ್ನು, ಪರಸಂಬಂಧದ ಚಾಳಿಗೂ ವ್ಯಕ್ತಿತ್ವಕ್ಕೂ ಸಂಬಂಧವಿದೆಯೆ ಎಂದು ಈ ಸಲ ನೋಡೋಣ.

ನನ್ನನ್ನು ಭೇಟಿಮಾಡಿದ ಕೆಲವು ಹೆಂಗಸರು ತಮ್ಮ ಗಂಡಸರ ಪರಸಂಬಂಧದ ಪ್ರಸಂಗಗಳನ್ನು ಹೀಗೆ ವಿವರಿಸಿದ್ದಾರೆ: ಒಬ್ಬಳ ಗಂಡನು ಹೆಂಡತಿಯು ಮನೆಯಲ್ಲಿ ಇರುವುದನ್ನು ಲೆಕ್ಕಿಸದೆ, ಮನೆಗೆಲಸದ ಹೆಣ್ಣನ್ನು ಹಿಂಬಾಲಿಸುತ್ತ, ಅವಕಾಶ ಸಿಕ್ಕಿದಾಗಲೆಲ್ಲ ಆಕೆಯ ಮೇಲೆ ಕೈಹಾಕಲು ಹೋಗುತ್ತಾನೆ; ಎರಡು ಸಲ ಸಿಕ್ಕಿಬಿದ್ದರೂ ಏನೋ ನೆಪ ಹೇಳಿ ತಪ್ಪಿಸಿಕೊಂಡಿದ್ದಾನೆ. ಇನ್ನೊಬ್ಬನು ಹೆಂಡತಿಯ ಎದುರೇ ಇನ್ನೊಬ್ಬಳನ್ನು ಹಾಸಿಗೆಗೆ ಕರೆದುಕೊಂಡು ಹೋಗುತ್ತಾನೆ. ಮೂರನೆಯ ಪ್ರಸಂಗದಲ್ಲಿ ಗಂಡನು ಇಬ್ಬರು ಹೆಂಡಂದಿರಿದ್ದೂ ಮೂರನೆಯವಳ ಹಿಂದೆ ಬಿದ್ದಿದ್ದಾನೆ. ಇಂಥವರನ್ನು ಸರಿದಾರಿಗೆ ತರಲು ಸಾಧ್ಯವೆ ಎಂದು ಕೇಳಿದ್ದಾರೆ. ಅವರಿಗೆ ಉತ್ತರ ಸ್ಪಷ್ಟವಾಗಿದೆ: ಈ ರೀತಿಯ ಲಂಗುಲಗಾಮಿಲ್ಲದ ಕಾಮುಕ ವರ್ತನೆಯ ಹಿಂದಿರುವ ಕಾರಣವೆಂದರೆ ಅವರ ವ್ಯಕ್ತಿತ್ವ ವಿಕಾರ (personality disorder) ಹಾಗೂ ಮಾನಸಿಕ ಅಸ್ವಸ್ಥತೆ. ಇವರ ದೃಷ್ಟಿಯಲ್ಲಿ ಲೈಂಗಿಕ ಚಟುವಟಿಕೆ ಎಂದರೆ ಕೇವಲ ಕಾಮತೃಪ್ತಿಗೆ ಸಂಬಂಧಪಟ್ಟಿದ್ದು, ಗಂಡುತನದ ಪಾರಮ್ಯವನ್ನು ಮೆರೆಯುವ ಸಂಕೇತವಾಗಿದೆ. ಇಂಥವರ ಅಂತರಾಳದಲ್ಲಿ ತೀವ್ರತರವಾದ ಗೊಂದಲಗಳಿರುತ್ತವೆ. ದೊಡ್ಡ ಸಮಸ್ಯೆ ಏನೆಂದರೆ ಇವರಲ್ಲಿ ಆತ್ಮಸಂಯಮ ಇರುವುದಿಲ್ಲ. ಅವಕಾಶ ಸಿಕ್ಕಿತೋ, ವಿವೇಚನೆಯಿಂದ ಯೋಚಿಸದೆ ದಿಢೀರನೇ ಧುಮುಕುತ್ತಾರೆ. ಇವರಲ್ಲಿ ಹಿಂಸಾಚಾರಿಗಳು (sadist), ಸಮಾಜಘಾತುಕ (sociopath) ಹಾಗೂ ದುರಹಂಕಾರದ ಆತ್ಮರತಿಯ (narcissist) ವ್ಯಕ್ತಿತ್ವದವರು ಮುಖ್ಯವಾಗಿದ್ದಾರೆ. ಅಪರಾಧಿ ಹಿನ್ನೆಲೆ, ಭಂಡತನ, ಸುಳ್ಳುತನ, ಬೇಜವಾಬ್ದಾರಿತನ, ಇತರರ ಹಕ್ಕುಗಳನ್ನು ಕಿತ್ತುಕೊಳ್ಳುವುದು, ಸಂಗಾತಿಗೆ ದೈಹಿಕ ಅಥವಾ ಭಾವನಾತ್ಮಕ ಹಿಂಸೆ ಕೊಡುವುದು, ವಿವೇಚನೆಯಿಲ್ಲದೆ ಲೈಂಗಿಕ ಸಂಪರ್ಕ ಮಾಡುವುದು, ದೂರವಾಗಲು ಹೋದರೆ ಪ್ರಾಣದ ಬೆದರಿಕೆ ಹಾಕುವುದು, ಹಾಗೂ ಕಾನೂನನ್ನು ಧಿಕ್ಕರಿಸುವುದು – ಇವು ಇವರಲ್ಲಿ ಎದ್ದುಕಾಣುತ್ತವೆ. ಇಂಥವರಿಗೆ ಹೆಣ್ಣಿನೊಡನೆ ಆರೋಗ್ಯಕರ ಭಾವನಾತ್ಮಕ ಸಂಬಂಧ ಬೆಳೆಸಿಕೊಳ್ಳಲು ಆಗುವುದಿಲ್ಲ. ಅಷ್ಟಲ್ಲದೆ ಇವರು ಸುಧಾರಿಸಲು ಇಷ್ಟಪಡುವುದಾಗಲೀ, ಆಪ್ತಸಲಹೆಗೆ ಒಪ್ಪುವುದಾಗಲೀ ಅಪರೂಪ. ಹಾಗಾಗಿ ಇವರಲ್ಲಿ ಬದಲಾವಣೆಯನ್ನು ತರುವುದು ಬಹುಕಷ್ಟ. ಇಂಥವರಿಂದ ಸಂಬಂಧವನ್ನು ಕಡಿದುಕೊಳ್ಳುವುದೇ ಹಿತ. ಆದರೆ ಇವರೊಂದಿಗೂ ಹೊಂದಾಣಿಕೆಯಿಂದ ಇರುವ ಹೆಂಗಸರು ಸಾಕಷ್ಟಿದ್ದಾರೆ. ಅವರು ಸಾಮಾನ್ಯವಾಗಿ ಅತ್ಯಾವಲಂಬನೆಯ ವ್ಯಕ್ತಿತ್ವ (dependent personality adaptation) ಹೊಂದಿರುವುದು ಕಂಡುಬಂದಿದೆ.

ಆದರೆ ಪರಸಂಬಂಧಕ್ಕೆ ಕೈಹಾಕುವವರಲ್ಲಿ ಹೆಚ್ಚಿನವರು ವ್ಯಕ್ತಿತ್ವದ ವಿಕಾರವಿಲ್ಲದೆ ನಿಮ್ಮನಿಮ್ಮಂಥ ಸಾಮಾನ್ಯರೇ ಆಗಿರುತ್ತಾರೆ. ಹಾಗಾಗಿ ಸಂಬಂಧದ ಭವಿಷ್ಯವನ್ನು ನಿರ್ಧರಿಸುವುದು ನೊಂದ ಸಂಗಾತಿಗೆ ಕಠಿಣವಾಗುತ್ತದೆ. ಅಷ್ಟಲ್ಲದೆ, ನಿರ್ಧಾರವು ಹೆಚ್ಚಿನ ಪ್ರಸಂಗಗಳಲ್ಲಿ ನೊಂದ ಸಂಗಾತಿಯ ಆತ್ಮಗೌರವ, ಹಾಗೂ ಅವರ ಮೂಲಕುಟುಂಬದ ನೆರವಿನ ಮೇಲೂ ಅವಲಂಬಿಸಿರುತ್ತದೆ. ಇದು ಹೇಗೆಂದು ವಿವರಿಸುತ್ತೇನೆ.

ಹುಟ್ಟುವಾಗ ಎಲ್ಲರೂ ಅಮಾಯಕರಾಗಿದ್ದು ಸ್ವಚ್ಛ ಮನಸ್ಸಿನವರು ಆಗಿರುತ್ತಾರಷ್ಟೆ? ಆದರೆ ಬೆಳೆಯುತ್ತ ಹಿರಿಯರಿಂದ ಶಿಸ್ತು, ವ್ಯವಸ್ಥೆ, ವಿಧೇಯತೆಯ ಹೆಸರಿನಲ್ಲಿ ದುರ್ವರ್ತನೆ, ಅವಹೇಳನ ಎದುರಿಸುತ್ತಾರೆ. 'ನಮ್ಮ ಮಾತು ಪಾಲಿಸಿದರೆ ಸರಿ, ಇಲ್ಲವಾದರೆ ನೀನು ಪ್ರೀತಿಗೆ ಅನರ್ಹ' ಎನ್ನುವ ಸಂದೇಶ ಇಲ್ಲಿದೆ. ಹೆಣ್ಣಾದರೆ ಈ ಸಂದೇಶವು ಇನ್ನೂ ಕಟುವಾಗಿರುತ್ತದೆ. ಹೆಣ್ಣುಮಗುವೆಂದು ಮುದ್ದುಮಾಡಿದ ಕುಟುಂಬಗಳಲ್ಲೂ ದಾಂಪತ್ಯದ ಭದ್ರತೆಯನ್ನು ಕಾಪಾಡುವ ಹೊಣೆಯನ್ನು ಹೆಣ್ಣಿನ ಹೆಗಲ ಮೇಲೆಯೇ ಹೊರೆಸಲಾಗುತ್ತದೆ. ಇಲ್ಲೊಬ್ಬಳು ಅಪ್ಪ ಹಾಗೂ ಅಣ್ಣಂದಿರ ಅತಿರಕ್ಷಣೆಗೆ ಒಳಗಾಗಿ ಮುದ್ದಿನಿಂದ ಬೆಳೆದು, ಅವರು ಆರಿಸಿದ ಗಂಡನ್ನು ಕಣ್ಣುಮುಚ್ಚಿ ಮದುವೆಯಾಗಿದ್ದಾಳೆ. ಗಂಡ ಇವಳನ್ನು ಪ್ರೀತಿಸದಿರುವ ಕಾರಣ ಅವನ ಪರಸಂಬಂಧ ಎಂದು ನಂತರ ಗೊತ್ತಾಗಿದೆ. ಇವಳು ತಕರಾರು ಮಾಡಿದಾಗ ತವರಿನ ಗಂಡಸರೆಲ್ಲ ಬಂದು, ತಪ್ಪಿತಸ್ಥನಿಗೆ ಸೂಚ್ಯವಾಗಿ ಬುದ್ಧಿಹೇಳಿ ಹೋಗಿದ್ದಾರೆ. ಪರಿಣಾಮ ಮಾತ್ರ ಶೂನ್ಯ. ತನಗೆ ಗಂಡನ್ನು ಆಯ್ಕೆ ಮಾಡುವ ಜವಾಬ್ದಾರಿ ಹೊತ್ತವರು ಆ ಗಂಡಿನಿಂದ ಉಂಟಾಗುವ ಸಮಸ್ಯೆಯ ಪರಿಹಾರದ ಜವಾಬ್ದಾರಿ ಹೊರಲು ತಯಾರಿಲ್ಲ. ನೀನೇ ಹೊಂದಾಣಿಕೆ ಮಾಡಿಕೋ, ಸರಿಹೋಗುತ್ತಾನೆ ಎಂದು ಜಾರಿಕೊಂಡಿದ್ದಾರೆ. ಹಾಗಾಗಿ ನಾಲ್ಕು ವರ್ಷವಾದರೂ ಇವಳು ಗಂಡನೊಡನೆ ಹೋರಾಡುತ್ತಲೇ ಇದ್ದಾಳೆ! (ಇದು ಎಷ್ಟು ಕಷ್ಟದ್ದೆಂದು ಅರ್ಥಮಾಡಿಸಲು ಆಕೆಯ ಅಪ್ಪ ಹಾಗೂ ಅಣ್ಣಂದಿರಿಗೆ ಈ ಉದಾಹರಣೆ ಕೊಟ್ಟೆ. "ನೀವೊಂದು ಪ್ರತಿಷ್ಠಿತ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದೀರಿ, ಆದರೆ ಸಂಪಾದನೆ ಅಷ್ಟಕ್ಕಷ್ಟೇ ಇದೆಯೆಂದುಕೊಳ್ಳಿ. ಸಂಬಳವನ್ನು ಹೆಚ್ಚಿಸಲು ಕೇಳುವ ಅವಕಾಶಕ್ಕಾಗಿ ಕಾಯುತ್ತೀರಿ. ಇಷ್ಟರಲ್ಲಿ ನಿಮ್ಮ ಜಾಗದಲ್ಲಿ ಇನ್ನೊಬ್ಬನನ್ನು ತಂದು ಕೂಡಿಸಿ, ನಿಮ್ಮ ಸಂಬಳದ ಹೆಚ್ಚಿನಂಶವನ್ನು ಅವನಿಗೆ ಕಿತ್ತುಕೊಟ್ಟರೆ ಏನು ಮಾಡುತ್ತೀರಿ? ಹಿಂದೆಮುಂದೆ ನೋಡದೆ ಕೆಲಸ ಬಿಡಲು ಹೊರಡುತ್ತೀರಿ. ಆಗ ನಿಮ್ಮ ಮನೆಯವರಾಗಲೀ, ಸಮಾಜವಾಗಲೀ ಒಪ್ಪದೆ ಮನೆತನದ ಹಾಗೂ ಸಂಸ್ಥೆಯ ಮರ್ಯಾದೆಯನ್ನು ಕಾಪಾಡಲು ಅದೇ ಕೆಲಸದಲ್ಲಿ ಇರಬೇಕು – ಅದೂ ಜೀವಮಾನವೆಲ್ಲ – ಎಂದು ಒತ್ತಾಯ ತಂದರೆ ನಿಮ್ಮ ಸ್ಥಿತಿ ಹೇಗಿರುತ್ತದೆ?" ಆಗ ಗಂಡಸರಿಗೆ ಅರ್ಥವಾಗಿ ಪರಿಣಾಮಕಾರಿಯಾದ ಕ್ರಮ ಕೈಗೊಳ್ಳುವಂತಾಯಿತು! )

ಹೀಗೆ, ಹೆಣ್ಣು ತನ್ನ ದಾಂಪತ್ಯದ ಬಗೆಗೆ ಅಂತಿಮ ನಿರ್ಧಾರ ಕೈಗೊಳ್ಳಬೇಕು ಎನ್ನುವಾಗ ಮುಖ್ಯ ಅಡ್ಡಿಯೆಂದರೆ ತವರಿನ ಬೆಂಬಲದಲ್ಲಿ ಇಚ್ಛಾಶಕ್ತಿಯ ಕೊರತೆ. (ಇದು ಗಂಡಿನಲ್ಲೂ ಕಾಡುವುದುಂಟು, ಆದರೆ ವಿರಳ.) ತನ್ನವರೆನ್ನುವವರು ಯಾರೂ ತನ್ನೊಡನೆ ಇಲ್ಲವೆಂದು ಅರಿವಾಗುವಾಗ ಆಗುವ ಸಂಕಟ ಹೇಳತೀರದು. ಸಂಗಾತಿಯನ್ನೂ, ಕುಟುಂಬದ ಭದ್ರತೆಯನ್ನೂ ಕಳೆದುಕೊಂಡು ಒಂಟಿಯಾಗುವ ಅನಿಸಿಕೆಯ ಜೊತೆಗೆ ತನ್ನವರು ತನ್ನವರಾಗದ ಒಂಟಿತನವೂ ಸೇರಿ ಸಂಕಟ ಇನ್ನೂ ಹೆಚ್ಚಾಗುತ್ತದೆ. ಇಷ್ಟೊಂದು ಒಂಟಿತನವನ್ನು ಎದುರಿಸಲು ಶಕ್ತಿ ಸಾಲದೆ ಅನೇಕರು ಪರಿಸ್ಥಿತಿಗೆ ಒಪ್ಪಿಕೊಳ್ಳುತ್ತಾರೆ. ಹಾಗಾಗಿ ಭದ್ರತೆ ಹಾಗೂ ಒಂಟಿತನದ ಭಯ – ಇವೆರಡೂ ಅಂಶಗಳು ಪರಸಂಬಂಧವನ್ನು ಬಿಡದಿರುವ ಗಂಡನ ಜೊತೆಗೆ ಅನಿವಾರ್ಯವಾಗಿ ಬದುಕಲು ಕಾರಣವಾಗುತ್ತವೆ. ಇನ್ನು ಮಕ್ಕಳಿದ್ದರಂತೂ ಉಸಿರೆತ್ತಲೂ ಆಗುವುದಿಲ್ಲ.

ಇಲ್ಲಿ ಇನ್ನೊಂದು ವಿಷಯವಿದೆ: ಕುಟುಂಬದ ಪ್ರತಿಷ್ಠೆಯನ್ನು ಉಳಿಸಿಕೊಳ್ಳಲಾಗಲೀ , ಅಭದ್ರತೆ ಹಾಗೂ ಒಂಟಿತನದಿಂದ ದೂರವಿರಲಿಕ್ಕಾಗಲೀ ಪರಸಂಬಂಧವನ್ನು ಸಹಿಸಿಕೋ ಎಂದು ಹೇಳುವುದು ಕೂಡ ಹಿತಚಿಂತಕರು ತೋರಿಸುವ ಕ್ರೌರ್ಯವಾಗುತ್ತದೆ. ಹೀಗೆ ಸಹಿಸಿಕೊಂಡು ಇರುವುದು ಗುಲಾಮಗಿರಿಗಿಂತ ಭಿನ್ನವೇನೂ ಅಲ್ಲ. ಅಷ್ಟೇ ಅಲ್ಲ, ಇದರಿಂದ ತಪ್ಪಿತಸ್ಥರು ತಮ್ಮ ಚಾಳಿಯನ್ನು ಬಿಡದಿರುವುದಕ್ಕೆ ಅನುವು ಮಾಡಿಕೊಟ್ಟಂತೆ ಆಗುತ್ತದೆ.

ಇದರಿಂದ ಹೊರಬರಲು ಏನಾದರೂ ಹಾದಿಯಿದೆಯೆ? ಇದನ್ನು ಮುಂದಿನ ಸಲ ನೋಡೋಣ.